# <u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>
## <u>ಪಿಸಿಆರ್.ನಂ.33/2025</u>

ಸಾಕ್ಷಿದಾರರ ಹೆಸರು : ಶ್ರೀಮತಿ ಸುನಂದ ದೇವಿ ಸಿಡಬ್ಲ್ಯೂ-1
ಗಂಡನ ಹೆಸರು : ಎಸ್.ಕೆ. ರಾಜು
ವಯಸ್ಸು : 65 ವರ್ಷ ಪ್ರಮಾಣ ವಚನ ಬೋಧಿಸಲಾದ
ಉದ್ಯೋಗ : ಗೃಹಿಣಿ ದಿನಾಂಕಃ 06.08.2025.
ವಾಸಸ್ಥಳ : ವಿದ್ಯಾನಗರ, ಮೂಡಿಗೆರೆ.

**<u>:ಪ್ರಮಾಣೀಕೃತ ಹೇಳಿಕೆ:</u>**

ಆರೋಪಿ ನನ್ನ ತಮ್ಮ. 1986 ರಿಂದ 2004 ರವರೆಗೂ ನಾನು ಹಾಲೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ನರ್ಸ್ ಆಗಿ ಕೆಲಸ ಮಾಡಿದ್ದೇನೆ. ನಂತರ 2004 ರಿಂದ 2020 ರವರೆಗೂ ಕುವೆಯತ್ ನ ಖಾಸಗಿ ಆಸ್ಪತ್ರೆಯಲ್ಲಿ ನರ್ಸ್ ಆಗಿ ಕೆಲಸ ಮಾಡಿ ಅಲ್ಲಿಂದ ದಿ.14.09.2020 ರಂದು ಮೂಡಿಗೆರೆಗೆ ವಾಪಸ್ಸು ಬಂದೆ. ನಾನು ಕುವೆಯತ್ ನಲ್ಲಿ ಕೆಲಸ ಮಾಡುವಾಗ ನನ್ನ ತಮ್ಮ ನನ್ನ ಬಳಿ ತನ್ನ ಖಾಸಗಿ ಉದ್ದೇಶಕ್ಕೆ ಹಣ ಕೊಡುವಂತೆ ಕೇಳಿ ಅದನ್ನು ವಾಪಸ್ಸು ಕೊಡುತ್ತೇನೆ ಎಂದು ಸಹಾ ಹೇಳಿದ್ದರು. ಈ ಕಾರಣ ನಾನು ನನ್ನ ತಮ್ಮನಾದ ಆರೋಪಿಗೆ ಸೇರಿದ ಕೆನರಾ ಬ್ಯಾಂಕ್, ನಾರವಿ ಶಾಖೆ, ಬೆಳ್ತಂಗಡಿ ತಾಲ್ಲೂಕು, ಇಲ್ಲಿನ ಬ್ಯಾಂಕ್ ಖಾತೆಗೆ ಪ್ರತೀ ತಿಂಗಳು ಹಣ ಜಮೆ ಮಾಡಿದ್ದು ಈ ರೀತಿ ಒಟ್ಟು ಸುಮಾರು ರೂ.12 ಲಕ್ಷದಷ್ಟು ಹಣವನ್ನು ಕೊಟ್ಟಿದ್ದೇನೆ. ನಾನು ಕುವೆಯತ್ ನಿಂದ ವಾಪಸ್ಸು ಬಂದ ನಂತರ ನನ್ನ ತಮ್ಮನ ಬಳಿ ಹೋಗಿ ಹಣ ವಾಪಸ್ಸು ಕೇಳಿದ್ದಕ್ಕೆ ಅವರು ನನಗೆ ಅವಾಚ್ಯ ಶಬ್ದಗಳಿಂದ ಬೈದು ಹಣ ಕೊಡುವುದಿಲ್ಲ ಎಂದು ನನ್ನನ್ನು ಮತ್ತು ನನ್ನ ಮಗನನ್ನು ರಾತ್ರಿ ಸಮಯಕ್ಕೆ ಮನೆಯಿಂದ ಹೊರಗೆ ಕಳುಹಿಸಿದ್ದಾರೆ. ನಂತರ ನಾನು ಮೂಡಿಗೆರೆಗೆ ವಾಪಸ್ಸು ಬಂದು ದಿ.03.02.2023 ರಂದು ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ನನ್ನ ತಮ್ಮನ ವಿರುದ್ಧ ದೂರು ದಾಖಲಿಸಿದ್ದೇನೆ. ಆದರೆ ಅವರು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ನಂತರ ದಿ.08.02.2023 ರಂದು ನಾನು ಜಿಲ್ಲಾ ಪೋಲಿಸ್ ವರಿಷ್ಟಾಧಿಕಾರಿಗಳಿಗೆ ದೂರು ಕೊಟ್ಟರು ಸಹಾ ಆರೋಪಿಯ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ನಂತರ ನಾನು ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿಕೊಂಡಿದ್ದು ಆರೋಪಿಯು ಹಾಜರಾಗಿ ನನಗೆ ಹಣ ಕೊಡುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ಕಾರಣ ನಾನು ಪ್ರಸ್ತುತ ದೂರನ್ನು ದಾಖಲಿಸಿಕೊಂಡು ಆರೋಪಿಯ ವಿರುದ್ಧ ಕಾನೂನು ಕ್ರಮಕ್ಕಾಗಿ ಪ್ರಾರ್ಥಿಸುತ್ತಿದ್ದೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸುತ್ತಿದ್ದು, ಅವುಗಳನ್ನು ನಿಶಾನೆಯಾಗಿ ಗುರುತಿಸಬೇಕಾಗಿ ಕೇಳಿಕೊಳ್ಳುತ್ತೇನೆ.

| ಕ್ರಮ ಸಂಖ್ಯೆ | ದಾಖಲಾತಿಗಳು | ನಿಶಾನೆಗಳು |
|---|---|---|
| 1 | PLC.30/2023 ರ ಆದೇಶಪುಟದ ದೃಢೀಕೃತ ನಕಲು | ನಿಪಿ-1 |
| 2 | ಉಲ್ಲೇಖ ಸಂ.23/2023 ರಡಿ ಮೂಡಿಗೆರೆ ಪೋಲಿಸ್ ಠಾಣೆಯಿಂದ ನೀಡಲಾದ ಸ್ವೀಕೃತಿ ಮತ್ತು ಹಿಂಬರಹ | ನಿಪಿ-2 ಮತ್ತು 3 |

| | | |
|---|---|---|
| 3 | Petition No.63/2023 ರಲ್ಲಿ ಮೂಡಿಗೆರೆ ಪೋಲಿಸ್ ಠಾಣೆಯಿಂದ ನೀಡಲಾದ ಸ್ವೀಕೃತಿ | ನಿಪಿ-4 |
| 4 | ದಿ.08.02.2023 ರಂದು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ಕೊಟ್ಟ ದೂರಿನ ಕಚೇರಿ ಪ್ರತಿ | ನಿಪಿ-5 |
| 5 | 26 ಹಣ ಸಂದಾಯ ರಶೀದಿಗಳನ್ನು | ನಿಪಿ-6 ರಿಂದ 31 |

ಆದ್ದರಿಂದ ಆರೋಪಿಯ ವಿರುದ್ಧ ಕಾನೂನು ಕ್ರಮಕ್ಕಾಗಿ ಪ್ರಾರ್ಥಿಸುತ್ತೇನೆ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ  ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್  ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.